



ಬಂಡೆಗಲ್ಲುಗಳ ಕಲಾಕೃತಿಗಳು, ಇನ್ನೊಂದು ಶಿಲೆಯಲ್ಲಿ ಕೆತ್ತಿದ ಪ್ರತಿಮೆಗಳು. ಇವುಗಳಲ್ಲಿ ಪ್ರಧಾನವಾಗಿರುವುದು ಕೇಂದ್ರದಲ್ಲಿರುವ ಶಿವನ ಮುಖದ ಬಂಡೆಗಲ್ಲ ಕಲಾಕೃತಿ. ಇದನ್ನು ಉನಕೋಟೀಶ್ವರ ಕಾಲಭೈರವ ಎನ್ನಲಾಗುತ್ತದೆ. ಶಿವನ ಮುಖ ಮಾತ್ರ ಇರುವ ಇದರ ಎತ್ತರ ಮೂವತ್ತು ಅಡಿ. ತಲೆಯುಡುಗೆಯ ಕುಸುರಿ ಕೆತ್ತನೆಯೇ ಸುಮಾರು ಹತ್ತು ಅಡಿ ಇದೆ. ಮುಡಿಯ ಎರಡು ಬದಿಗಳಲ್ಲೂ ಎರಡು ಪೂರ್ಣಾಕೃತಿಯ ಸ್ತ್ರೀ ವಿಗ್ರಹಗಳಿವೆ. ಸಿಂಹದ ಮೇಲೆ ನಿಂತಿರುವ ಸ್ತ್ರೀ ವಿಗ್ರಹ ದುರ್ಗೆಯದು.

ಇಲ್ಲಿರುವ ಶಿವನ ಮುಖದ ಆಕೃತಿಯ ಈ ಶಿಲಾ ಕೆತ್ತನೆಗಳು ದೇಶದಲ್ಲೇ ದೊಡ್ಡವು. ಬಂಡೆಗಲ್ಲಲ್ಲಿ ಕೆತ್ತಿದ ಮೂರು ಗಣೇಶ ವಿಗ್ರಹಗಳಿವೆ. ಇವುಗಳ ಮೇಲ್ಭಾಗದಿಂದ ಪುಟ್ಟ ಝರಿಯೊಂದು ಹರಿದು ಬಂದು ಕೆಳಗೆ ಬೀಳುತ್ತದೆ. ಇದು ಗಣೇಶನಿಗೆ ಮಾಡುವ ಜಲಾಭಿಷೇಕದಂತೆ ಭಾಸವಾಗುತ್ತದೆ. ಬೆಟ್ಟದ ಮೆಟ್ಟಿಲುಗಳನ್ನೇರಿ ಮೇಲೆ ಹೋದರೆ ಅಲ್ಲಿ ಮೂರು ಬದಿಗಳಲ್ಲಿ ಕೆತ್ತಿದ ಬ್ರಹ್ಮ ವಿಷ್ಣು ಮಹೇಶ್ವರರ ವಿಗ್ರಹ ಹಾಗೂ ಅಪರೂಪವಾದ ಸೂರ್ಯನ ಶಿಲಾ ಪ್ರತಿಮೆಗಳಿವೆ. ಹನುಮ, ನರಸಿಂಹ, ನಂದಿಯರ ಕೆತ್ತನೆಗಳೂ ಇವೆ. ಇಡೀ ಬೆಟ್ಟದ ಬಂಡೆಹಾಸುಗಳೆಲ್ಲ ಶಿಲ್ಪಿಯ ಕೆತ್ತನೆಯ ಕೌಶಲವನ್ನು ಸಾರಿ ಹೇಳುತ್ತವೆ. ಬಯಲೇ ಆಲಯವಾಗಿರುವ ಇಲ್ಲಿನ ದೇವಾನುದೇವತೆಗಳಿಗೆ ಪೂಜೆ ಪುನಸ್ಕಾರಗಳ ನಿರ್ಬಂಧ ನಿಯಮಗಳೇನೂ ಇಲ್ಲ. ನಾವು ಹೋದಾಗ ಪ್ರಧಾನ ಶಿವ ಪ್ರತಿಮೆಯ ಬಳಿ ಯಾರೋ ಪೂಜೆ ಸಲ್ಲಿಸಿದ ಕುರುಹು ಇತ್ತು.

ಇಲ್ಲಿನ ಶಿಲ್ಪಗಳು ಯಾವುದೇ ಶಾಸ್ತ್ರೀಯ ಶಿಲ್ಪಕಲಾ ಪ್ರಕಾರಕ್ಕೆ ಒಳಪಡುವುದಿಲ್ಲ. ಈಶಾನ್ಯ ಭಾರತದ ರಾಜ್ಯಗಳಲ್ಲೆಲ್ಲ ಬುಡಕಟ್ಟು ಸಂಸ್ಕೃತಿಯೇ ಪ್ರಧಾನವಾಗಿರುವಂತೆ ಈ ಶಿಲ್ಪಗಳು ಕೂಡ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವುದು ಇವುಗಳ ಇನ್ನೊಂದು ವೈಶಿಷ್ಟ್ಯ. ಇವುಗಳ ಕೆತ್ತನೆಯ ಕಾಲದ ಬಗ್ಗೆ ಕೂಡ ಅಷ್ಟೊಂದು ನಿಖರತೆ ಇಲ್ಲ. ಇಲ್ಲಿನ ಬೆಟ್ಟದ ಮೇಲ್ಭಾಗದಲ್ಲಿ ದೊರೆತಿರುವ ಭಗ್ನಗೊಂಡ ವಿಗ್ರಹಗಳು ಹಾಗೂ ದೇಗುಲದ ಅವಶೇಷಗಳ ಆಧಾರದ ಮೇಲೆ ಈ ಬಂಡೆಗಲ್ಲ ಕೆತ್ತನೆಗೂ ಮುನ್ನ 9–10ನೆಯ ಶತಮಾನಗಳಲ್ಲಿ ಇಲ್ಲಿ ಒಂದು ದೇವಾಲಯವಿದ್ದಿತೆಂದು ಭಾವಿಸಲಾಗಿದೆ. ಮುಂದೆ ಪಾಲ ವಂಶದ ದೊರೆಗಳ ಸಮೃದ್ಧತೆಯ ಆಳ್ವಿಕೆಯಲ್ಲಿ ಹನ್ನೊಂದು ಹನ್ನೆರಡನೆಯ ಶತಮಾನಗಳ ಕಾಲದಲ್ಲಿ ಇದೊಂದು ಶೈವ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದ ಸ್ಥಳವಾಯಿತೆಂದೂ, ಅದೇ ಸಮಯದಲ್ಲಿ ಇಲ್ಲಿನ ಬಂಡೆಗಳಲ್ಲಿ ಈ ಕೆತ್ತನೆಯ ಕಲೆ ಅರಳಿರಬಹುದೆಂದೂ ಅಭಿಪ್ರಾಯವಿದೆ.

ಏಪ್ರಿಲ್‌ನಲ್ಲಿ ಇಲ್ಲಿ ಜರುಗುವ 'ಅಶೋಕಾಷ್ಟಮಿ ಮೇಳ', ಜನವರಿಯಲ್ಲಿನ ಸ್ಥಳೀಯ ಉತ್ಸವ ವಿದೇಶೀಯರ ಸಹಿತ ಸಾವಿರಾರು ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ. ಭಾರತೀಯ ಕೇಂದ್ರ ಪುರಾತತ್ವ ಮತ್ತು ಪ್ರಾಚ್ಯ ವಸ್ತು ಇಲಾಖೆಯ ಸಂರಕ್ಷಣೆಯಲ್ಲಿರುವ ಈ ಸ್ಥಳ, ಪ್ರಾಚೀನ ಸ್ಮಾರಕಗಳ ರಾಷ್ಟ್ರೀಯ ಪ್ರಾಮುಖ್ಯತೆಯ ಸ್ಥಳ. ಇದನ್ನು ವಿಶ್ವ ಪಾರಂಪರಿಕ ತಾಣವಾಗಿ ಘೋಷಿಸಬೇಕೆಂಬ ಬೇಡಿಕೆ ಇದೆ. ಮಾನವನ ಕಲಾ ಕೌಶಲ, ಪ್ರಕೃತಿಯ ಒಲುಮೆ ಮಿಲನಗೊಂಡಿರುವ ಈ ಸ್ಥಳದ ಇತಿಹಾಸವನ್ನು ಅರಿಯುವಲ್ಲಿ ಸಂಶೋಧನೆ ಉತ್ಖನನಗಳ ಕೆಲಸವಾಗಬೇಕಿದೆ. ನಾವು ಹೋದಾಗ ಬೆಟ್ಟದ ಮೇಲ್ಭಾಗದಲ್ಲಿ ನಡೆಯುತ್ತಿದ್ದ ನಿರ್ಮಾಣ ಕೆಲಸಕ್ಕೆ ಸಂಬಂಧಿಸಿದಂತೆ ಆರ್.ಸಿ.ಸಿ.ಯ ಸೆಂಟರಿಂಗ್‌ನ ಕಂಬಗಳನ್ನು ನೆಲದ ಮೇಲೆ ಮಲಗಿಸಿಟ್ಟ ಶಿಲ್ಪಗಳ ಮೇಲೇ ಇರಿಸಿದ್ದು ನೋಡಿ ಬೇಸರವೆನಿಸಿತು.

'ಉನಕೋಟಿ' ಎಂದರೆ ಬಂಗಾಳಿ ಭಾಷೆಯಲ್ಲಿ 'ಕೋಟಿಗೆ ಒಂದು ಕಮ್ಮಿ' ಎಂದರ್ಥ. ಈ ಶಿಲ್ಪಗಳ ಬಗ್ಗೆ ಹಲವು ದಂತಕತೆಗಳು ಪ್ರಚಲಿತವಿವೆ.

ತೆರೆದ ಬಯಲ ಈ ಶಿಲ್ಪಕಲಾಶಾಲೆ ಒಂದು ಬಯಲು ವಿಶ್ವವಿದ್ಯಾಲಯದಂತಿದೆ. ರವೀಂದ್ರನಾಥ ಠಾಗೋರರ ಶಾಂತಿನಿಕೇತನದ ನೆನಪಾಗುತ್ತದೆ. ಠಾಗೋರರಿಗೆ ತ್ರಿಪುರಾ ರಾಜ್ಯದ ಬಗ್ಗೆ ವಿಶೇಷವಾದ ಒಲವಿತ್ತು. ಅವರು ಸ್ಫೂರ್ತಿಗಾಗಿ ಆಗಾಗ ಅಗರ್ತಲಾಕ್ಕೆ ಬಂದು ತಂಗುವುದಿತ್ತು. ಇಂದು ಮ್ಯೂಸಿಯಂ ಆಗಿರುವ ಅಗರ್ತಲಾದ ಉಜಯಂತ್ ಅರಮನೆಯಲ್ಲಿ ರವೀಂದ್ರರಿಗಾಗಿ ಎರಡು ಕೋಣೆಗಳು ಮೀಸಲಾಗಿವೆ. ರಾಜ್ಯದ ವಿವಿಧ ಪ್ರಮುಖ ಸ್ಥಳಗಳಲ್ಲಿ ರವೀಂದ್ರರ ಆಳೆತ್ತರದ ಪ್ರತಿಮೆಗಳಿವೆ. ಉನಕೋಟಿಯ ಮುಕ್ತ ಪರಿಸರ ಕೂಡ ಅವರನ್ನು ಪ್ರೇರೇಪಿಸಿದ್ದೀತು.

ಹೋಗುವುದು ಹೇಗೆ?: ರಾಜಧಾನಿ ಅಗರ್ತಲಾದಿಂದ ಉನಕೋಟಿ 178 ಕಿ.ಮೀ. ದೂರದಲ್ಲಿದೆ. ಇಲ್ಲಿಂದ 19 ಕಿ,ಮೀ. ದೂರದಲ್ಲಿ ಧರ್ಮಾನಗರ್‌ನ ರೈಲ್ವೆ ನಿಲ್ದಾಣವಿದೆ. ಅಗರ್ತಲಾದಿಂದ ಬೆಳಗಿನ ಹತ್ತು ಗಂಟೆ ಒಳಗೆ ಧರ್ಮಾನಗರಕ್ಕೆ ಬರಬಹುದು. ಮಧ್ಯಾಹ್ನ ಧರ್ಮಾನಗರದಿಂದ ರೈಲಿನಲ್ಲಿ ಹೊರಟರೆ ರಾತ್ರಿ ಎಂಟಕ್ಕೆ ಅಗರ್ತಲಾ ತಲುಪಬಹುದು. ಇಲ್ಲಿಗೆ ಕೇವಲ 10 ಕಿ.ಮೀ. ದೂರದ ಕೈಲಾಶಾಹಾರ್‌ನಲ್ಲಿ ವಿಮಾನ ನಿಲ್ದಾಣ ಇದೆಯಾದರೂ ಅದರ ದುರಸ್ತಿ ಕಾರ್ಯಗಳು ನಡೆಯುತ್ತಿದ್ದು, ಅದು ಮುಗಿದು ಬಳಕೆಯಲ್ಲಿದೆಯೇ ಎಂದು ತಿಳಿದುಕೊಳ್ಳುವುದು ಒಳ್ಳೆಯದು.